ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) :- ಅಧ್ಯಕ್ಷರೇ, ಹೋದ ವರ್ಷ ವರುಣಾ ನಾಲೆಗೆ ಬಜೆಟ್‌ನಲ್ಲಿ 32 ಕೋಟಿ ರೂಪಾಯಿಗಳನ್ನು ಇಟ್ಟಿದ್ದು ಅದರಲ್ಲಿ ಸುಮಾರು 20 ಕೋಟಿ ರೂ. ಹೆಚ್ಚು ರೂಪಾಯಿಗಳನ್ನು ವಿರ್ಚುಮಾಡಿದ್ದೇವೆ. ಹಿಂದೆ ಯಾವ ವರ್ಷವೂ ಅಷ್ಟು ಹಣ ವಿರ್ಚಾಗಿರಲಿಲ್ಲ. ಹಿಂದೆ ಎಷ್ಟು ವಿರ್ಚಾಗಿತ್ತು ಎಂದರೆ 11-12 ಕೋಟಿ ರೂಪಾಯಿಗಳು ವಿರ್ಚಾಗಿತ್ತು. ಈ ವರ್ಷವೂ ಕೂಡ 32 ಕೋಟಿ ರೂಪಾಯಿಗಳನ್ನೂ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ. ಮತ್ತು ಅಲ್ಲಿ ಕೆಲಸ ಬಹಳ ವೇಗದಿಂದ ನಡೆಯುತ್ತಿದೆ. ತಾರಕಾದ್ದೂ ಕೂಡ ಕಬಿನಿ ಬ್ಯಾಕ್ ವಾಟರ್‌ನಿಂದ ಲಿಫ್ಟ್ ಮಾಡಬೇಕು. ಏಕೆಂದರೆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ನೀರು ಇಲ್ಲ. ತಾರಕಾ ಕೊಟ್ಟು ಬಿಟ್ಟರೆ ನೀರು ಬರುತ್ತಿಲ್ಲ, ಶೇಖರಣೆ ಆಗುತ್ತಿಲ್ಲ. ಆದಕ್ಕೋಸ್ಕರ ಕಬಿನಿಯಿಂದ ಬ್ಯಾಕ್ ವಾಟರ್‌ನ್ನು ಲಿಫ್ಟ್ ಮಾಡಿ ತಾರಕಾಗೆ ಬಿಡಬೇಕಾಗುತ್ತದೆ. ಅದರ ಬಗ್ಗೆ ಕೂಡ ಸರ್ಕಾರ ಈಗ ಪರಿಶೀಲನೆ ಮಾಡುತ್ತಿದೆ.

(ಊ) ಶೂನ್ಯ ವೇಳೆ ಬಗ್ಗೆ ಚರ್ಚೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ಪಾಯಿಂಟ್ ಆಫ್ ಆರ್ಡರ್. ನಾನು ಒಬ್ಬ ಹೊಸ ಸದಸ್ಯ. ಜೀರೋ ಅವರ್‌ನಲ್ಲಿ ನಿನ್ನೆ ಅಥವಾ ಇವತ್ತು ಸಂಭವಿಸಿದ ಘಟನೆ ಬಗ್ಗೆ ತುರ್ತು ಪರಿಹಾರ ಪಡೆಯುವುದಕ್ಕೆ ಜೀರೋ ಅವರ್ ಇರುವುದು ಎಂದು ನನ್ನ ಭಾವನೆ. ಜೀರೋ ಅವರ್‌ನಲ್ಲಿ ಯಾವುದಾದರೂ ಪ್ರಶ್ನೆ ಕೇಳಬಹುದೇ ಸಭಾಧ್ಯಕ್ಷರೇ ಅಥವಾ ಯಾವುದನ್ನು ಕೇಳಬೇಕು ಎಂಬ ಬಗ್ಗೆ ನಮಗೆ ಮಾರ್ಗದರ್ಶನ ನೀಡಬೇಕು.

ಅಧ್ಯಕ್ಷರು :- ಒಬ್ಬ ಕಿರಿಯ ಸದಸ್ಯರು ಇದನ್ನು ಪಾಯಿಂಟ್‌ಔಟ್ ಮಾಡಿದ್ದಾರೆ. ಸದನದಲ್ಲಿ ಜೀರೋ ಅವರ್ ಎಂದು ಇರತಕ್ಕಂಥಾದ್ದು, ನಿನ್ನೆ ಸದನ ಮುಕ್ತಾಯವಾಗಿ ಇವತ್ತು ಸದನ ಪ್ರಾರಂಭವಾಗುವುದರೊಳಗಾಗೆ ನಡೆದಿರಬಹುದಾದಂಥ ಯಾವುದಾದರೂ ಒಂದು ಘಟನೆಯಿದ್ದು, ನೋಟೀಸ್ ಕೊಡುವುದಕ್ಕೆ ನಿಯಮಾವಳಿಗಳ ಪ್ರಕಾರ ಸಮಯಾವಕಾಶ ಇಲ್ಲದೇ ಇದ್ದು, ಬೇರೆ ರೀತಿಯಲ್ಲಿ ತರಲಿಕ್ಕೆ ಆಗದೇ ಇದ್ದು, ಸಾರ್ವಜನಿಕವಾಗಿ ಮಹತ್ವದ್ದು ಆಗಿದ್ದರೆ ಸರ್ಕಾರದ ಗಮನವನ್ನು ತುರ್ತಾಗಿ ಸೆಳೆಯುವುದಕ್ಕೆ ಆ ಘಟನೆಯನ್ನು ಪ್ರಸ್ತಾಪ ಮಾಡುವುದಕ್ಕೆ ಸೀಮಿತವಾಗಿ ಉಪಯೋಗಿಸಕೊಳ್ಳಬೇಕು. ಇದು ಎಲ್ಲರಿಗೂ ಗೊತ್ತಿರಬೇಕು ಎಂದು ನಾನು ತಿಳಿಸುವ ಪ್ರಯತ್ನ ಮಾಡುತ್ತೇನೆ, ವಿನಂತಿ ಮಾಡುತ್ತೇನೆ. ಉಳಿದಂತೆ ನಾನು ಏನು ಮಾಡುತ್ತೇನೆ ಹೇಳಿ? ನಾನೂ ಸ್ವಲ್ಪ ಸಮಯದಲ್ಲಿ ಅಸಹಾಯಕನಾಗುತ್ತೇನೆ. ನೀವು ಎತ್ತಿ ಹಿಡಿದಿರತಕ್ಕಂಥ ಯಾವ ಕ್ರಿಯಾಲೋಪ ಇದೆ, ತಾವು ತಿಳಿದುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು :- ನೀವು ಅಸಾಹಯಕರಾಗಬಾರದು. ನೀವು ಅಸಹಾಯಕರಾದರೆ ಬಹಳ ಮಹತ್ವದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅನಾನುಕೂಲವಾಗುತ್ತದೆ.

ಅಧ್ಯಕ್ಷರು :- ನಾನು ಹೇಳುವುದನ್ನು ಕೇಳಿ. ಕಿರಿಯ ಸದಸ್ಯರಾದರೆ ಸ್ವಲ್ಪ ಧ್ವನಿ ಏರಿಸಿ ಮಾಡಬಹುದು. ಎಲ್ಲಾ ತಿಳಿದಂಥವರೂ ಕೂಡ ಎಲ್ಲಾ ವಿಚಾರಗಳನ್ನು ಎಲ್ಲಾ

ಸಂದರ್ಭಗಳಲ್ಲಿ ಎಲ್ಲರೂ ಮಾತನಾಡಬೇಕು ಎಂದು ಹೇಳುತ್ತಾರೆ. ಮತ್ತು ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಚಾರದ ಮೇಲೆ ಚರ್ಚೆ ಇರುವುದಿಲ್ಲ. ಪ್ರಸ್ತಾಪ ಮಾಡುತ್ತಾರೆ, ಅವರು ಒಂದು ಪ್ರತಿಕ್ರಿಯೆ ತೋರಿಸುತ್ತಾರೆ. ಅಲ್ಲಿಗೆ ಅದು ಮುಕ್ತಾಯ ವಾಗುತ್ತದೆ. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕು. ತಿಳಿದುಕೊಳ್ಳದಿದ್ದರೆ ನಾನು ಏನು ಮಾಡಲಿಕ್ಕಾಗುತ್ತದೆ.?

ಶ್ರೀ ಕಾಗೋಡು ತಿಮ್ಮಪ್ಪ :- ನಾವು ಸಾಧ್ಯವಾದಷ್ಟೂ ಅವಕಾಶಗಳನ್ನು ಉಪ ಯೋಗಿಸಿಕೊಳ್ಳಬೇಕು ಎನ್ನುವ ಕಾತುರತೆ ಸರ್ಕಾರಕ್ಕೆ ಇದ್ದೇ ಇರುತ್ತದೆ. ಆದರೆ ತಮ್ಮ ಅಪ್ಪಣೆ ಇಲ್ಲದೆ ಯಾರೂ ಕೂಡ ಪ್ರಶ್ನೆಗಳನ್ನು ಎತ್ತುವುದಿಲ್ಲ, ಚರ್ಚೆಯನ್ನೂ ಮಾಡು ವುದಿಲ್ಲ. ತಮ್ಮ ಅಪ್ಪಣೆಯನ್ನು ಉಪಯೋಗಿಸಿಕೊಂಡೇ ಮಾಡುತ್ತಾರೆ.

ಅಧ್ಯಕ್ಷರು :- ನನ್ನ ಅಪ್ಪಣೆಯನ್ನು ಪಡೆದುಕೊಂಡ ಮೇಲೂ ಕೂಡ ಅದನ್ನು ಯಾವ ರೀತಿ ವಿನಿಯೋಗಿಸಿಕೊಳ್ಳಬೇಕು ಎನ್ನುವುದನ್ನು ಅವರ ವಿವೇಚನೆಗೆ ಬಿಡುತ್ತೇನೆ ನಾನು.

ಶ್ರೀ ಕಾಗೋಡು ತಿಮ್ಮಪ್ಪ :- ಯಾವ ಹಂತದಲ್ಲೂ ಕೂಡ ನಮ್ಮ ವಿವೇಚನೆ ಯನ್ನು ಪ್ರಯೋಗ ಮಾಡುವುದನ್ನು ತಾವು ನಿಯಂತ್ರಿಸಬಹುದು.

ಅಧ್ಯಕ್ಷರು :- ಅದಕ್ಕೆ ನಮ್ಮ ಹಕ್ಕು ಇದೆ. ಅದು ಬೇರೆ ಪ್ರಶ್ನೆ. ಅಧಿಕಾರ ಇಲ್ಲ ಎಂದು ನಾನು ಹೇಳುತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್ :- ತಾವು ಬಹಳ ದಯಾಮಯಿಗಳು. ಸರ್ಕಾರಕ್ಕೆ ಏನೂ ಸೂಚನೆ ಇಲ್ಲದೇ, ಏನೂ ಗೊತ್ತಿಲ್ಲದೇ ಇದ್ದಕ್ಕಿದ್ದ ಹಾಗೆ ಪ್ರಶ್ನೆ ಕೇಳಿದರೆ ಹೇಗೆ?

ಶ್ರೀ ಹೆಚ್. ಎನ್. ನಂಜೇಗೌಡ :- ಡಿಮ್ಯಾಂಡ್ ಮೇಲೆ ಮಾಡುವಂಥ ಚರ್ಚೆಯನ್ನು ನಾವು ಯಾರಾದರೂ ಎತ್ತಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ರೆಡಿಯಾಗಿ ಕುಳಿತಿರುತ್ತೀರಿ. ಅಂಕಿ ಅಂಶ ಸರಿಯಾಗಿ ಕೊಡುತ್ತೀರೋ, ಇಲ್ಲವೋ? ಮಂತ್ರಿಗಳಿಗೆ ಮೊದಲು ಪಾಠ ಹೇಳಿ ಜೀರೋ ಅವರ್‌ನಲ್ಲಿ ಯಾವುದಕ್ಕೆ ಉತ್ತರ ಹೇಳಬೇಕು. ಯಾವುದಕ್ಕೆ ಹೇಳಬಾರದು, ಡಿಮ್ಯಾಂಡ್‌ಗೆ ಯಾವುದಕ್ಕೆ ಉತ್ತರ ಹೇಳಬೇಕು ಎಂದು.

ಶ್ರೀ ಜೆ. ಹೆಚ್. ಪಟೇಲ್ :- ನಿರೀಕ್ಷಿತ ಪ್ರಶ್ನೆಯಾಗಿ ಆ ಪ್ರಶ್ನೆ ಬಗ್ಗೆ ಉತ್ತರ ಗೊತ್ತಿದ್ದೂ ಹೇಳದಿದ್ದರೆ ಆ ಮಾತು ಬರುತ್ತದೆ. ಆದರೆ ಇದ್ದಕ್ಕಿದ್ದ ಹಾಗೆ ಪ್ರಶ್ನೆ ಕೇಳಿದರೇ, ಹೇಗೆ? ಈಗ ವಾಟಾಳರು ಕೇಳಿದರು, ಅವರು ನಾಲೆ ಆಗಿಲ್ಲ, ತಾರಕಾ ಏನೂ ಆಗಿಲ್ಲ ಎಂದು ಹೇಳಿದರು. ಇದನ್ನು ನಾನು ನಿಮಗೆ ಹೇಳಿದ್ದರಲ್ಲ; ಮಾನ್ಯ ಅಧ್ಯಕ್ಷರು ಬಹಳ ದಯಾಮಯಿಗಳು, ಕೆಲವು ಸಲ ನಾವು ಬಹಳ ಪೇಚಾಟಕ್ಕೆ ಸಿಕ್ಕಿಹಾಕಿಕೊಂಡು ಬಿಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- ಇದು ನಿನ್ನೆ ಮೊನ್ನೆಯದಲ್ಲ, ಇದು ನಾವು ಬದುಕಿನ ಪ್ರಶ್ನೆ. ಇದು ತಮಗೆ ಎಲ್ಲೂ ಗೊತ್ತಿರುತ್ತದೆ, ಇದು ಬೈಹಾರ್ಟ್ ಆಗಿರುತ್ತದೆ. ನಿಮಗೆ, ಇದು ನಿಮ್ಮ ತಲೆಯಲ್ಲಿ ಇರುತ್ತದೆ ಎಂದು ನಾವು ಅಂದುಕೊಂಡಿದ್ದೇವೆ. ಅಧ್ಯಕ್ಷರು ಹೇಳುತ್ತಾರೆ, ಹಿರಿಯ ಸದಸ್ಯರು ಹಾಗೆ ಮಾಡುತ್ತಾರೆ ಎಂದು. ನಾನು ಅವರನ್ನು

ಕೇಳದೇ ಇಲ್ಲಿ ಹೇಳುತ್ತಿಲ್ಲ. ನಾನು ಈ ಪ್ರಶ್ನೆಯನ್ನು ಪ್ರಾರಂಭ ಮಾಡಿದ ತಕ್ಷಣವೇ ಈ ಸುದ್ದಿ ಪ್ರಾರಂಭವಾಗುವುದಾದರೆ ನಾವು ಏನು ಮಾಡಬೇಕು, ನನಗೆ ಅರ್ಥವಾಗುತ್ತಿಲ್ಲ. ನಮ್ಮ ಹಕ್ಕನ್ನು ಮೊಟಕು ಮಾಡುವುದಕ್ಕಾಗುವುದಿಲ್ಲ. ನಾವು ನಮ್ಮ ಪ್ರಶ್ನೆಯನ್ನು ಕೇಳ ಬೇಕಾಗುತ್ತದೆ. ನೀವು ನಿಮ್ಮ ಪ್ರಶ್ನೆಯನ್ನು ಎತ್ತಲೇ ಬೇಡಿ ಎಂದು ಹೇಳಿದರೆ ಆ ಪ್ರಶ್ನೆ ಬೇರೆ.

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೆ, ನಾವು ಸೂಚನೆ ಕೊಟ್ಟು ಕೇಳಿದ ಪ್ರಶ್ನೆಗೆ ಮಾತ್ರ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವು ಕೊಟ್ಟಂಥ ಉತ್ತರ ಪೂರ್ತಿ ಇಲ್ಲದಿದ್ದರೆ ನಾವು ಕೆಲವೊಂದು ಸ್ಪಷ್ಟೀಕರಣ ಕೇಳಬೇಕಾಗುತ್ತದೆ. ಈ ರೀತಿ ಹೆಚ್ಚಿಗೆ ಮಾತನಾಡಬಾರದೆಂದು ನೀವು ಕೇಳಿದರೆ ನಮ್ಮ ಹಣೆಬರಹ ಏನು? ನೀವು ನಮ್ಮ ಜೊತೆಯಲ್ಲಿ ಹಿರಿಯ ಸದಸ್ಯರಾಗಿರತಕ್ಕಂಥವರು, ತಾವೇ ಈ ರೀತಿ ಪ್ರಶ್ನೆ ಮಾಡಿದರೆ ನಾವು ಏನು ಮಾಡಬೇಕು?

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆ ಎಂದರೆ ತಮ್ಮಿಂದ ಪರ್ಮಿಷನ್ ತೆಗೆದುಕೊಂಡು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಈ ಪ್ರಶ್ನೆ ಕೇಳಿದಾಗ ನಮ್ಮ ಹತ್ತಿರ ಉತ್ತರ ರೆಡಿ ಇದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ನಂತರ ಉತ್ತರ ಕೊಡುತ್ತೇವೆಂದು ಹೇಳುತ್ತೇವೆ. ಎಲ್ಲದಕ್ಕೂ ಈಗಲೇ ಉತ್ತರ ಕೊಡಬೇಕೆಂದು ಹೇಳಿದರೆ ಹೇಗೆ?.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವುದಕ್ಕೆ ಅವಕಾಶ ಇದ್ದರೆ ಸರ್ಕಾರದಿಂದ ಉತ್ತರ ಕೊಡಿ. ಆಗಲಿಲ್ಲವೆಂದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿ. ಆದರ ಪ್ರಯೋಜನ ನೀವು ಪಡೆದುಕೊಳ್ಳದೇ ಹೋದರೆ ಅದಕ್ಕೆ ನಾವು ನಿಮ್ಮ ಪರವಾಗಿ ಅಲ್ಲಿಗೆ ಬರಬೇಕೆ?

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗಲೇ ಉತ್ತರ ಕೊಡಬೇಕೆಂದು ಕೇಳುತ್ತಾರೆ. ಅದು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಈ ಶೂನ್ಯ ವೇಳೆಗೆ, ಪ್ರಶ್ನೋತ್ತರ ಆದನಂತರ ಈ ದಿನವೇ ನಡೆದಿರತಕ್ಕಂಥ ಯಾವದಾದರೂ ಪ್ರಶ್ನೆಯನ್ನು ಕೇಳಬೇಕೆಂದು ಹೇಳತಕ್ಕಂಥ ಮಡಿವಂತಿಕೆ ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಪ್ರಾಮುಖ್ಯವಾದ ಪ್ರಶ್ನೆಯನ್ನು ತಮಗೆ ಕೇಳುತ್ತೇವೆ. ನಾನು ನಿಮಗೆ ಅವಕಾಶ ಕೊಡುವು ದಕ್ಕಾಗುವುದಿಲ್ಲ, ನೀವು ಮಾತನಾಡುವುದು ಸರಿಯಿಲ್ಲವೆಂದು ಹೇಳಿದರೆ ನಾನು ಒಪ್ಪಿ ಕೊಳ್ಳುತ್ತೇನೆ. ತಾವು ಏನು ಬೇಕಾದರೂ ತೀರ್ಪು ಕೊಡಿ. ಅದು ನಿಮಗೆ ಸೇರಿದ್ದುದು. ನನ್ನ ಅಭಿಪ್ರಾಯವನ್ನು ತಮ್ಮ ಮುಂದೆ ಮಂಡಿಸುತ್ತೇನೆ. ಸಾಮಾನ್ಯವಾಗಿ ಪ್ರಮುಖವಾದ ವಿಚಾರವನ್ನು ಹೇಳುವುದಕ್ಕೆ ನಮಗೆ ಹಕ್ಕು ಇದೆ. ನಿನ್ನೆ ಶೂನ್ಯವೇಳೆ ಇಲ್ಲ ಎಂದು ತಾವು ಹೇಳಿದಿರಿ. ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಶೂನ್ಯ ವೇಳೆಗೆ ಅವಕಾಶ ಕೊಟ್ಟಿದ್ದೀರಿ. ನನ್ನ ಪ್ರಶ್ನೆಯನ್ನು ಪ್ರಾರಂಭ ಮಾಡುವುದಕ್ಕೆ ಜಾಸ್ತಿ ಸಮಯವನ್ನು ತೆಗೆದು ಕೊಳ್ಳಲಿಲ್ಲ. ಆದ್ದರಿಂದ ಸುರೇಶ್ ಕುಮಾರ್‌ರವರು ತಮ್ಮ ಹಕ್ಕನ್ನು ಒಂದು ಕ್ರಿಯಾಲೋಪದ ಮೂಲಕ ಎತ್ತಿ ಇದನ್ನು ಒಂದು ಕಗ್ಗತ್ತಲೆಗೆ ತಂದಿಡತಕ್ಕಂಥ ವ್ಯವಸ್ಥೆ ಬೇಡ. ಇದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದು ಅದು ನಮ್ಮ ಹಕ್ಕು. ನಾನು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ ಕೊಡಲಿಲ್ಲವೆಂದರೆ, ನನ್ನ ಪ್ರಜಾಪ್ರಭುತ್ವದ ಮಹತ್ವದಲ್ಲಿ ನಾನು ಸಭಾತ್ಯಾಗ ಮಾಡಿ ಘೇರಾವೋ ಮಾಡುತ್ತೇನೆ. ಅದಕ್ಕೆ ನೀವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ? ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸಭಾ ತ್ಯಾಗ ಮಾಡುವುದು ನನ್ನ ಹಕ್ಕು. ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಗೆ ಆಗಮಿಸಿ ಧರಣಿ ಕುಳಿತರು).

SRI H. N. NANJE GOWDA :- Point of order.

Mr. SPEAKER :- He is on a point of order.

SRI H. N. NANJE GOWDA :- Sir, the business of the House should be conducted as per rules. ನಿನ್ನೆ ಸದನ ಮುಗಿದು ಇವತ್ತು ಸದನ ಸೇರುವುದರೊಳಗೆ ಏನಾದರೂ ಆಗಬಾರದ ಅನಾಹುತವಾದರೆ ಅಂತಹ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಹುದು ಎಂದು ತಾವು ಆಪ್ಷನ್ ಕೊಡಿಸಿದಿರಿ. 10 ವರ್ಷಗಳ ಹಿಂದೆ ನಾನು ಲೋಕಸಭೆಯಲ್ಲಿ ನೋಡಿದ್ದೇನೆ. zero hour ನೀವು ಹೇಳಿದ್ದುದು ಸರಿ. ಈ ಎಲ್ಲಾ ವಿಚಾರಗಳನ್ನು ಇಲ್ಲಿ ಮಾತನಾಡಿದರೆ ಇದು ಹಳ್ಳಿಯ ಪಂಚಾಯತಿ ಕಟ್ಟೆ ಆದ ಹಾಗೆ ಆಗುತ್ತದೆ. We cannot convert this House into a village panahayat meeting. This is an August House. We have to maintian the dignity and decorem of the House. ಏನೇನು ಚರ್ಚೆ ಮಾಡುತ್ತಾರೆಂದು ಬೇರೆಯವರು ವಾಚ್ ಮಾಡುತ್ತಿರುತ್ತಾರೆ. ಇಲ್ಲಿ ಮನಸ್ಸಿಗೆ ಬಂದಿದ್ದೆಲ್ಲಾ ಚರ್ಚೆ ಮಾಡುತ್ತೇನೆಂದರೆ ಹೇಗೆ? ಹಿಂದುಗಡೆಯಲ್ಲಿ ಕುಳಿತಿರುವವರು ಏನಾಗಬೇಕು?

MR. SPEAKER :- That is exactly my problem. ಇಬ್ಬರು ಧಾರವಾಡ ಜಿಲ್ಲೆಯಲ್ಲಿ ಸದಸ್ಯರು ಆವರ ಆಸ್ಪತ್ರೆಗೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ 5 ದಿವಸದಿಂದ ಟೈಮ್ ಕೇಳುತ್ತಿದ್ದಾರೆ. ಶೂನ್ಯ ವೇಳೆಯಲ್ಲಿನ ಪ್ರಸ್ತಾಪ ಒಂದರಿಂದ ಒಂದೂಕಾಲು ಗಂಟೆಯೊಳಗೆ ಮುಗಿಯದೆ ಹೋದರೆ ನಾನು ಇತರೇ ವಿಷಯಗಳನ್ನು ಮುಗಿಸುವುದು ಹೇಗೆ? ಈ ರೀತಿ ಆಗತ್ತಿರುವುದರಿಂದ ಆಸ್ಪತ್ರೆಯ ವಿಷಯ ಮಾತನಾಡುವುದಕ್ಕೆ ಸದಸ್ಯರಿಗೆ ಆಗುತ್ತಿಲ್ಲ. ಅಲ್ಲಿ ಯಾರೋ ಸತ್ತಿದ್ದರೂ ಕೂಡ ಪ್ರಸ್ತಾಪ ಮಾಡುವ ಹಾಗಿಲ್ಲ.

+ **ಶ್ರೀ ಬಿ. ಬಿ. ಶಿವಪ್ಪ** (ಸಕಲೇಶಪುರ) :- ಮಾನ್ಯ ಸಭಾಧ್ಯಕ್ಷರೆ, ನಾವು ರಾಜಕೀಯದಲ್ಲಿ ಹಲವು ವರ್ಷದಿಂದ ಇರಬಹುದು. ಆದರೆ ಸದನಕ್ಕೆ ಇದು ಮೊದಲನೆಯ ಸಲ ಪ್ರವೇಶ ಮಾಡಿರುವುದು. ಅಧ್ಯಕ್ಷರು ಏನು ಅನುಮತಿ ಕೊಡುತ್ತಾರೆ, ಮತ್ತು ನಾವು ಈ ಸದನಕ್ಕೆ ಪ್ರವೇಶ ಮಾಡುವಾಗ ನಮಗೆ ಇಲ್ಲಿ ಏನೊಂದು ಪುಸ್ತಕವನ್ನು ಕೊಟ್ಟಿದ್ದೀರಿ ಅದರ ಪ್ರಕಾರ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿ

ಅಂದಿನಿಂದ ಇಂದಿನವರೆಗೆ ಕಾಯುತ್ತಾ ಕುಳಿತ್ತಿದ್ದೇವೆ. ಆ ಒಂದು ಕಾರಣಕ್ಕೋಸ್ಕ
ಸದನದಲ್ಲಿ ನಡೆಯತಕ್ಕಂಥ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಆಗುತ್ತಿಲ್ಲ. ಯಾವುದೋ ಒಂದ
ವಿಷಯವನ್ನು ತೆಗೆದುಕೊಂಡು ಕೆಲವರೇ ಈ ಸದನವನ್ನು ತಮ್ಮ ಕೈಗೆ ತೆಗೆದುಕೊಂಡ
ದಿನಗಟ್ಟಲೆ ಮಾತನಾಡುವುದರಿಂದ, ನಾನು ಸೇರಿ ಅನೇಕ ಹೊಸ ಸದಸ್ಯರಿಗೆ ಇವತ್ತಿನ
ವರೆವಿಗೆ ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಹಾಗೆ ಮಾತನಾಡಲು ಈ ಸದನದಲ್ಲಿ
ಅವಕಾಶವೇ ಸಿಗುತ್ತಿಲ್ಲ. ಈ ಸದನವನ್ನು ಒಂದು ತಿಂಗಳು ಅಲ್ಲ 2 ತಿಂಗಳು ನಡೆಸಿದರೂ
ಕೂಡ ನಮಗೆ 5 ನಿಮಿಷ ಸಹ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ. ಈ
ರೀತಿಯಾದರೆ ನಾವು ನಮ್ಮ ಕ್ಷೇತ್ರದ ಮತದಾರರಿಗೆ ಯಾವ ರೀತಿಯಾಗಿ ಉತ್ತರ
ಕೊಡಬೇಕೋ ಗೊತ್ತಾಗುತ್ತಿಲ್ಲ. ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ಯಾವ ರೀತಿ ಸದನದಲ್ಲಿ
ನಾವು ಮಂಡಿಸಬೇಕೋ ಆದರೂ ಕೂಡ ನಮಗೆ ಅರ್ಥವಾಗುತ್ತಿಲ್ಲ. ಹಾಗಾಗಿ ನಮ್ಮ
ಪ್ರಾರ್ಥನೆ ತಮ್ಮಲ್ಲಿ ಇಷ್ಟೆ, ಅದೇನೆಂದರೆ, ನಾವು ಪುಸ್ತಕದ ಪ್ರಕಾರ ಕೆಲಸ ಮಾಡುವುದಕ್ಕೆ
ಸಾಧ್ಯವಿಲ್ಲ ಎನ್ನುವ ತೀರ್ಮಾನವನ್ನು ಮಾಡಿಕೊಂಡಿದ್ದೇವೆ. ನಾವು ಕೂಡ ಅದೇ
ರೀತಿಯಲ್ಲಿ ಇದ್ದು ಯಾರು ಬಾಯಿ ಜೋರು ಇದೆ, ಯಾರ ಕೈ ಜಾಸ್ತಿ ಇದೆ
ಅಂತಹವರಿಗೆ ಮಾತ್ರ ಇಲ್ಲಿ ಅವಕಾಶ ಎನ್ನುವುದಾದರೆ ನಾವೂ ಅದನ್ನೇ ಪ್ರಾರಂಭ
ಮಾಡಬೇಕಾಗುತ್ತದೆ. ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದ್ದರಿಂದ ದಯಮಾಡಿ
ಯಾವ ರೀತಿಯಾಗಿ ಈ ಸದನ ನಡೆಸಬೇಕು ಎನ್ನುವುದಕ್ಕೆ ತಾವು ಏನು ಮಾರ್ಗದರ್ಶನ
ಮಾಡುತ್ತೀರೋ ಹಾಗೆ ನಡೆಯಲಿ. ಬೇರೆಯವರಿಗೆ ಬಾಯಿ ಜೋರು ಇದ್ದರೆ ಅವರಿಗಿಂತ
ನಮಗೂ ಕೂಡ ಬಾಯಿ ಜೋರು ಇದೆ. ಆದರೆ ಘನತೆ ಗೌರವಕ್ಕೋಸ್ಕರ ನಾವು ಅಂಥ
ಈ ಸದನದಲ್ಲಿ ತಲೆತಗ್ಗಿಸಿ ನಿಂತಿದ್ದೇವೆ. ಮಾತನಾಡಲಿಕ್ಕೆ ಅವಕಾಶ ಇದ್ದರೂ ಕೂಡ
ಮಾತನಾಡಲಿಕ್ಕೆ ಆಗುತ್ತಿಲ್ಲ. ಇವತ್ತು ಈ ಒಂದು ವಿಚಾರ ಪ್ರಾರಂಭವಾಗಿರುವುದರಿಂದ
ಇದು ಇಲ್ಲಿಗೆ ಅಂತ್ಯ ಆಗಬೇಕಾಗುತ್ತದೆ. ಸರಿಯಾಗಿ ಸದನ ನಡೆಯುವುದಕ್ಕೆ ತಾವು
ಕಟ್ಟುನಿಟ್ಟಾದ ಕ್ರಮ ಹಾಕಿಕೊಳ್ಳತಕ್ಕಂಥಾದ್ದು ಮತ್ತು ಸದನ ಯಾವ ರೀತಿ ನಡೆಯಬೇಕೆಂದ
ನಮ್ಮ ಕೈಗೆ ಪುಸ್ತಕ ಏನು ಕೊಟ್ಟಿದ್ದೀರಿ ಅದೇ ರೀತಿಯಲ್ಲಿ ಸದನ ನಡೆಯಬೇಕು.

ಅಧ್ಯಕ್ಷರು :- ಶೂನ್ಯ ವೇಳೆ ಮತ್ತು ಪ್ರಶ್ನೋತ್ತರ ವೇಳೆಗೆ ಸಂಬಂಧಪಟ್ಟಹಾಗೆ
ಮಾನ್ಯ ಸದಸ್ಯರುಗಳಿಗೆ ನಾನು ಇಷ್ಟೇ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಸದಸ್ಯರ
ಗಳು ಉಪ ಪ್ರಶ್ನೆಗಳನ್ನು ಕೇಳುವಾಗ ನಾನು ಅನೇಕ ಜನರನ್ನು ಬಹಳ ದಿವಸಗಳಿಂದ
ನೋಡುತ್ತಿದ್ದೇನೆ. ಎಷ್ಟೋ ಸಲ ಹೇಳಿದ್ದೇನೆ. ಪರಿಪರಿಯಾಗಿ ವಿವಿಧವಿಧವಾಗಿ ಹೇಳಿ
ಕೊಟ್ಟಿದ್ದೇನೆ. ಉಪಪ್ರಶ್ನೆಗಳನ್ನು ಕೇಳಿ ಎಂದರೆ ಭಾಷಣ ಮಾಡುತ್ತಾರೆ. ಅಲ್ಲಿರತಕ್ಕಂಥ
ವಿಷಯವನ್ನು ಬಿಟ್ಟು ಬೇರೆ ಏನೋ ಕೇಳುತ್ತಾರೆ. ಇಂತಹ ಸಂದರ್ಭದಲ್ಲಿ ಎಲ್ಲ
ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೆ. ಆದರೂ ಅವರು ತಿಳಿದುಕೊಳ್ಳುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :- ಮಾನ್ಯ ಅಧ್ಯಕ್ಷರೇ, ಎಲ್ಲರೂ ಒಂದೇ
ತರಹ ಇರುವುದಕ್ಕಾಗುವುದಿಲ್ಲ. ಪ್ರಶ್ನೆಗಳನ್ನು ಕೇಳತಕ್ಕಂಥ ವಿಚಾರದಲ್ಲಿ ನಾವು ಯಾವುದೊ
ಒಂದು ಶಾಲೆಗೆ ಹೋಗಿ, ಕಾಲೇಜಿಗೆ ಹೋಗಿ ಕಲಿತು ಬಂದಿದ್ದಲ್ಲ. ಅನುಭವಗಳನ್ನ
ನಾವು ಇಲ್ಲಿ ಪಡೆಯಬೇಕಾಗುತ್ತದೆ. ನಾವು ಶಾಸಕರಾಗಿ ಇಲ್ಲಿಗೆ ಬಂದಾಗ, ಕೆಲವರು ತಮ್ಮ
ಉತ್ಸಾಹವನ್ನು ಪ್ರದರ್ಶನ ಮಾಡಿ ಅಥವಾ ಆಸಕ್ತಿವಹಿಸಿ ಹೆಚ್ಚು ಸಮಯವನ್ನ

ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಜಾಸ್ತಿ ಸಮಯವನ್ನು ತೆಗೆದು ಕೊಳ್ಳಬೇಡಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು :- ದಯಮಾಡಿ ಕೇಳಿ. ನಿಮ್ಮ ವಾದ ಸರಿಯಿದೆ. ಆದರೆ ಸನ್ನಿವೇಶ ಸರಿಯಿಲ್ಲ. ಅದಕ್ಕೋಸ್ಕರವಾಗಿ ಹೊಸದಾಗಿ ಆಯ್ಕೆಯಾಗಿ ಬಂದ ಸದಸ್ಯರುಗಳಿಗೆ ಪ್ರಾರಂಭದಲ್ಲಿ ಮೈಸೂರಿನಲ್ಲಿ 2 ಹಂತದಲ್ಲಿ ಟ್ರೈನಿಂಗ್ ಇಟ್ಟುಕೊಂಡು ಅವರಿಗೆಲ್ಲಾ ನಾನು ಸ್ವಲ್ಪ ತಿಳುವಳಿಕೆ ಕೊಟ್ಟೆ. ಈಗ ಅವರ ಕಡೆಯಿಂದ ಏನೂ ಸಮಸ್ಯೆ ಬರುತ್ತಿಲ್ಲ. ಉಳಿದಿದ್ದನ್ನು ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಡಿ. ಎ. ಸದಾನಂದ ಗೌಡ (ಪುತ್ತೂರು) :- ಮಾನ್ಯ ಅಧ್ಯಕ್ಷರೇ, ನೀವು ಪಾಠ ಹೇಳಿಕೊಟ್ಟ ಕಾರಣ ನಾವು ಸುಮ್ಮನೆ ಕುಳಿತಿದ್ದೀವೆ. ಇಲ್ಲದೆ ಹೋದರೆ ನಾವು ಯಾವಾಗಲೋ ಹಾರಬೇಕಾಗಿತ್ತು. ಅಧ್ಯಕ್ಷರೇ, ಹೌದು, ನೀವು ಹೇಳುತ್ತಿರತಕ್ಕಂಥದ್ದು ಸತ್ಯ. ನಾನು ಅದನ್ನೇ ಹೇಳಿದ್ದುದು ತಿಮ್ಮಪ್ಪನವರಿಗೆ ಪೂರ್ಣ ಮಾಹಿತಿ ಇಲ್ಲದೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾರ ಬಗ್ಗೆಯೂ ವೈಯಕ್ತಿಕವಾಗಿ ಯಾರೂ ಕೂಡ ಮಾತನಾಡುತ್ತಿಲ್ಲ. ಆದರೆ ಒಂದು ನಿಯಮಾವಳಿ ಯಾವ ರೀತಿ ಇದೆ ಅದರ ಪ್ರಕಾರ ಚರ್ಚೆಯಾಗಬೇಕು ಎನ್ನುವ ದೃಷ್ಟಿಯಿಂದ ಹೇಳಿದ್ದೇವೆ ಅಷ್ಟೆ. ನಾವುಗಳೆಲ್ಲಾ ಮೈಸೂರಿಗೆ ಬಂದು ತಮ್ಮ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದೇವೆ. ಹಾಗಾಗಿ ನಮ್ಮ ಅನೇಕ ಸದಸ್ಯರುಗಳು ನಮಗೆ ಮಾತನಾಡಲು ಅವಕಾಶ ಸಿಗುತ್ತಿಲ್ಲವೆಂದು ಕೇಳುತ್ತಿದ್ದೇವೆ.

ಅಧ್ಯಕ್ಷರು :- ನನಗೆ ನಿಮ್ಮ ಅಭಿಪ್ರಾಯದ ಜೊತೆಗೆ ಪೂರ್ಣ ಸಹಮತವಿದೆ. ನಾನು ಅದನ್ನು ಅಲ್ಲ ಎಂದು ಹೇಳುತ್ತಿಲ್ಲ. ನೀವು ಹೇಳಿದ್ದು ಆಗಲಿ, ಸುರೇಶ್‌ರವರು ಹೇಳಿದ್ದು ಆಗಲಿ, ನಾನೂ ಕೂಡ ಅದನ್ನೇ ಹೇಳುತ್ತಿದ್ದೇನೆ. ಎಲ್ಲರೂ ಕೂಡ ನನಗೆ ಸಹಕರಿಸುವುದಕ್ಕೆ ಪ್ರಯತ್ನ ಪಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

+ **ಶ್ರೀ ಎಂ. ಸಿ. ನಾಣಯ್ಯ** (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೇ, ನೀವು ಈ ಸದನದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಕೂಡ ಬೇಕಾದಷ್ಟು ಅವಕಾಶಗಳನ್ನು ಕೊಟ್ಟಿದ್ದನ್ನು ನಾವು ಬಹಳಷ್ಟು ಸಲ ನೋಡಿದ್ದೇವೆ. ಒಂದು ಪ್ರಮುಖವಾದ ವಿಚಾರ ಬಂದಾಗ ಬಹುಶಃ ಸಮಯಕ್ಕಿಂತಲೂ ಹೆಚ್ಚು ಸಮಯ ಕೊಟ್ಟು ಸಂಬಂಧಪಟ್ಟ ವಿಷಯ ಚರ್ಚೆಯಾಗಿರುವುದನ್ನು ನೋಡಿದ್ದೇವೆ. ಕೆಲವು ಸಂದರ್ಭದಲ್ಲಿ ಶೂನ್ಯ ವೇಳೆಗೆ ಪ್ರಸ್ತಾಪಿಸತಕ್ಕಂಥ ವಿಷಯದ ಮೇಲೆ ತಮ್ಮ ಕೊಠಡಿಯಲ್ಲಿ ನಾವು ಅದನ್ನು ಚರ್ಚೆಮಾಡಿದ್ದೇವೆ. ಶೂನ್ಯ ವೇಳೆ ಎನ್ನತಕ್ಕಂಥದ್ದಕ್ಕೆ ಬಹಳ ಸಮಯವನ್ನು ನಾವು ಬಳಸಿಕೊಂಡಿದ್ದಕ್ಕೆ ನಮ್ಮ ದೈನಂದಿನ ಕಾರ್ಯಕಲಾಪಗಳನ್ನು ಮಾಡಲಿಕ್ಕೆ ಆಗದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಇಷ್ಟು ದಿವಸವಾದರೂ ಕೂಡ ಚರ್ಚೆ ಪ್ರಾರಂಭಿಕ ಹಂತದಲ್ಲಿಯೇ ಇದೆ. ನಾವು ಯಾವುದೇ ಸಂದರ್ಭದಲ್ಲಿ ಚರ್ಚೆಯ ಮುಕ್ತಾಯದ ಹಂತಕ್ಕೆ

ಬರಲಿಕ್ಕೆ ಆಗಲಿಲ್ಲ. ಎರಡನೆಯ ಭಾಗ ಏನೆಂದರೆ ಆಡಳಿತ ಪಕ್ಷದ ವತಿಯಿಂದ ನಾವು ನಿಮಗೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟುಬಿಟ್ಟಿದ್ದೇವೆ. ನಾವು ಈ ತರಹ ಶೂನ್ಯ ವೇಳೆಯನ್ನು ಪ್ರಾರಂಭಮಾಡಿ ಈ ನಮ್ಮ ರೆಗುಲ್ಯರ್ ಕಾರ್ಯಕಲಾಪಗಳಿಗೆ ಅಡ್ಡಿ ಬರುತ್ತಿರ ತಕ್ಕಂಥದ್ದಕ್ಕೆ ನಾವು ಯಾರೂ ಈ ಭಾಗದಿಂದ ಅಡ್ಡಿ ಮಾಡಲಿಲ್ಲ. ಆದರೆ ಕೆಲವು ಸಂದರ್ಭದಲ್ಲಿ ಅನಿವಾರ್ಯವಾಗಿ ಇರತಕ್ಕಂಥ ಪ್ರಶ್ನೆಗಳು ಬಂದಾಗ ತಾವೂ ಕೂಡ ತಮ್ಮ ಮನಸ್ಸಿನ ನೋವನ್ನು ವ್ಯಕ್ತಮಾಡಿದ್ದೀರಿ. ಆದ್ದರಿಂದ ನಾನು ಎಲ್ಲರನ್ನು ಕೇಳಿಕೊಳ್ಳುವುದೇನೆಂದರೆ ಕೆಲವು ಸಂದರ್ಭದಲ್ಲಿ ನಾವೇ ಸ್ವಯಂ ನಿಯಂತ್ರಣವನ್ನು ಹಾಕಿಕೊಳ್ಳಬೇಕು. Self-imposed discipline ಇಲ್ಲದೇ ಹೋದರೆ ನಾನು ಏನು ಹೇಳುತ್ತೇನೆಂದರೆ ಸಭಾಧ್ಯಕ್ಷರಿಂದ ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಆದ್ದರಿಂದ ನಾವೆಲ್ಲರೂ ಸ್ವಯಂ ನಿಯಂತ್ರಣವನ್ನು ಮಾಡಿಕೊಳ್ಳಲು ಹೊರಟರೆ ಈ ಕೆಲಸವನ್ನು ಮಾಡಬಹುದೆನಿಸುತ್ತೆದೆ. ಆದ್ದರಿಂದ ಈ ಶೂನ್ಯ ವೇಳೆಯಲ್ಲಿ ಏಕಾಏಕಿ ಕೆಲವು ವಿಚಾರಗಳನ್ನು ಎತ್ತುತ್ತಿದ್ದರೆ, ಬಹುಶಃ ಆದರ ಮೇಲೆ ಕೆಲವು ಸಂದರ್ಭದಲ್ಲಿ ಉತ್ತರ ಇರಬಹುದು, ಅಥವಾ ಇಲ್ಲದೇ ಇರಬಹುದು. ಉತ್ತರ ಕೊಡಲಿಕ್ಕೆ ಆಗದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹತ್ತಾರು ವರ್ಷಗಳ ಹಿಂದೆ ಇದ್ದಂಥ ವಿಚಾರವನ್ನು 3 ತಿಂಗಳು ಅಥವಾ 6 ತಿಂಗಳ ಹಿಂದೆ ಇರತಕ್ಕಂಥ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದಾಗ ಇರತಕ್ಕಂಥ ಪ್ರಶ್ನೆಗೆ ಖಂಡಿತ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವಾಗ ಇದನ್ನು ಕೂಡ ಸ್ವಲ್ಪಮಟ್ಟಿಗೆ ಗಮನದಲ್ಲಿಟ್ಟುಕೊಂಡು ಮಾಡಿದರೆ ಒಳ್ಳೆಯದು. ನಮ್ಮ ಆಡಳಿತ ಪಕ್ಷದ ವತಿಯಿಂದ ನಮ್ಮ ಸಂಪೂರ್ಣವಾದ ಸಹಕಾರವನ್ನು ನಿಮಗೆ ಕೊಟ್ಟಿದ್ದೇವೆ. ಬಹುಶಃ ಸರ್ಕಾರದ ಕೊರತೆ ಎಲ್ಲಿಯಾದರೂ ಇದಿದ್ದರೆ ನನಗೆ ಗೊತ್ತಿಲ್ಲ, ಇದ್ದರೆ ಅದನ್ನು ತಾವೇ ಹೇಳಬೇಕಾಗುತ್ತದೆ.

+ **ಶ್ರೀ ಬಿ. ಎಸ್. ಯಡಿಯೂರಪ್ಪ** (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು 1983 ರಿಂದ ಶಾಸಕನಾಗಿದ್ದೇನೆ. ನನ್ನ ದೃಷ್ಟಿಯಿಂದ ಈ ಸದನದಲ್ಲಿ ವಿರೋಧ ಪಕ್ಷದ ಸಂಖ್ಯೆ ಜಾಸ್ತಿ ಇರುವುದರಿಂದ ಇಲ್ಲಿ ಹೆಚ್ಚು ಜನ ಬಂದು ಕುಳಿತುಕೊಳ್ಳುತ್ತಾರೆ. ಬಹಳ ಗಂಭೀರವಾದಂಥ ಚರ್ಚೆಗಳು ಆಗುತ್ತಿವೆ. ಇದರಿಂದ ನನಗೆ ಸಮಾಧಾನವಾಗಿವೆ. ಆದರೆ ಪ್ರಶ್ನೆ ಇರುವಂಥದ್ದು ಏನೆಂದರೆ ನಾವು ಮುಂದೆ ಕುಳಿತಿರತಕ್ಕಂಥವರು ಹೆಚ್ಚು ಸಮಯ ತೆಗೆದುಕೊಳ್ಳುತ್ತೇವೆಂದು. ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರಿಗೆ ಸದನದಲ್ಲಿ ಮಾತನಾಡಲು ಅವಕಾಶ ಸಿಗದೇ ಇರತಕ್ಕಂಥ ಒಂದು ಉಸಿರು ಕಟ್ಟುವಂಥ ಪರಿಸ್ಥಿತಿ ಇರುವುದು ನಿಜ. ಅದರಲ್ಲಿ ಎರಡು ಮಾತಿಲ್ಲ. ಇನ್ನು ಮುಂದೆ ಶೂನ್ಯ ವೇಳೆಯಲ್ಲಿ ಯಾವುದು ಮಹತ್ವವಿದೆ ಎಂದು ನಾವು ತಮ್ಮ ಕೊಠಡಿಗೆ ಬಂದು ಕೇಳುತ್ತೇವೆ. ನನಗೆ ಗೊತ್ತಿರುವ ಅನುಭವದ ಪ್ರಕಾರ ಆಡಳಿತ ಪಕ್ಷದವರು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಶೂನ್ಯ ವೇಳೆಯಲ್ಲಿ ಪ್ರಮುಖವಾದ ವಿಷಯಗಳನ್ನು ತೆಗೆದುಕೊಂಡು 4 ರಿಂದ 5 ಗಂಟೆ ಚರ್ಚೆ ಮಾಡಿರತಕ್ಕಂಥ ಅನೇಕ ಉದಾಹರಣೆಗಳು ಉಂಟು. ಅದು ಆ ವಿಷಯದ ಮಹತ್ವದ ಮೇಲೆ ಹೋಗುತ್ತದೆ. ಸಮಯ ಉಳಿಸಬೇಕಾಗಿದೆ, ಬೇರೆಯವರಿಗೆ ಮಾತನಾಡಲು ಅವಕಾಶ ಸಿಗಬೇಕಾಗಿದೆ; ಸನ್ಮಾನ್ಯ ನಾಗರಾಜರವರಿಗೆ ವಿನಂತಿ ಮಾಡುತ್ತಿದ್ದೇನೆ.

ಬನ್ನಿ, ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಕುಳಿತುಕೊಂಡು ನಂತರ ಮಾತನಾಡಿ, ಏಕೆಂದರೆ ಅವರು ಪ್ರಸ್ತಾಪ ಮಾಡಿದಾಗ ಈ ವಿಚಾರ ಪ್ರಸ್ತಾಪಕ್ಕೆ ಬಂತು ಎನ್ನುವ ಅಪಾರ್ಥಕ್ಕೆ ಅವಕಾಶವಾಗಬಾರದು. ನಾವೆಲ್ಲರೂ ತಪ್ಪುಗಳನ್ನು ಮಾಡಿದ್ದೇವೆ. ಇನ್ನು ಮುಂದೆ ಶೂನ್ಯ ವೇಳೆಯಲ್ಲಿ ಮಹತ್ವವಾದ ವಿಷಯವನ್ನು ಪ್ರಸ್ತಾಪ ಮಾಡಿ. ಇಲ್ಲದಿದ್ದರೆ ಈ ತರಹ ಮಾಡಿಬಿಟ್ಟರೆ ತೂಕಡಿಸುವ ಸರ್ಕಾರಕ್ಕೆ ನಾವು ಹಾಸಿಗೆ ಹಾಸಿಕೊಟ್ಟ ಹಾಗೆ ಆಗುತ್ತದೆ. ಶೂನ್ಯ ವೇಳೆ ಇಲ್ಲ, ಇದು ಬರುವುದಿಲ್ಲ, ನಮ್ಮ ಹತ್ತಿರ ಉತ್ತರ ರೆಡಿ ಇಲ್ಲವೆಂದು ಅವರು ಹೇಳುವುದಕ್ಕೆ ಪ್ರಾರಂಭ ಮಾಡಿಬಿಟ್ಟರೆ ಮತ್ತೆ ನಾವು ಸಂಕಟಕ್ಕೆ ಸಿಕ್ಕಿಬಿಡುತ್ತೇವೆ. ಅದೂ ಆಗಬಾರದು. ನಮ್ಮಲ್ಲೂ ಸಹ ಪ್ರಮುಖವಾದಂಥ ವಿಷಯವನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಿಮ್ಮ ಕೊಠಡಿಯಲ್ಲಿ ಕುಳಿತು ಇದರ ಬಗ್ಗೆ ಯೋಚನೆ ಮಾಡೋಣ. ನಾಗರಾಜ್‌ರವರು ತಮ್ಮ ಸ್ಥಳಕ್ಕೆ ಬಂದು ಕುಳಿತುಕೊಳ್ಳಲಿ ಎಂದು ವಿನಂತಿ ಮಾಡುತ್ತೇನೆ. ನಂತರ ಮಾನ್ಯ ಅಧ್ಯಕ್ಷರು ಏನು ಹೇಳುತ್ತಾರೆ ಹಾಗೆ ನಡೆದುಕೊಳ್ಳುತ್ತೇವೆ.

+**ಶ್ರೀ ಆಯನೂರು ಮಂಜುನಾಥ್** (ಹೊಸನಗರ) :- ಮಾನ್ಯ ಅಧ್ಯಕ್ಷರೆ, ಈಗ ಸಂದರ್ಭ ಬಂದಿದ್ದರಿಂದ ಈ ಸಮಯದ ಬಗ್ಗೆ ಬಹಳ ದಿವಸಗಳಿಂದ ನಮ್ಮ ಮನಸ್ಸಿನಲ್ಲಿ ರತಕ್ಕಂಥ ವಿಚಾರವನ್ನು ತಮ್ಮ ಮುಂದೆ ಹೇಳಲಿಕ್ಕೆ ಬಯಸುತ್ತಿದ್ದೇನೆ. ಚರ್ಚೆಗಳು ನಡೆಯುತ್ತವೆ. ಬೇಡಿಕೆಗಳ ಮೇಲಾಗಲಿ, ಅಥವಾ ಇನ್ನಿತರ ವಿಷಯಗಳ ಮೇಲಾಗಲಿ ಚರ್ಚೆಯಲ್ಲಿ ಭಾಗವಹಿಸಲು ನಾವು ಬಹಳ ಜನ ಹೊಸ ಸದಸ್ಯರು ತಯಾರಾಗಿ ಬರುತ್ತೇವೆ. ಪ್ರಾರಂಭದಲ್ಲಿ ನಾನಾ ತರಹ ನಡೆಯುತ್ತದೆ. ಕೊನೆಗೆ ಎಲ್ಲಿ ಗಿಲೊಟಿನ್ ಆಗಿಬಿಡುತ್ತದೆಯೋ ಎನ್ನುವ ಭಯ ಉಂಟಾಗುತ್ತದೆ. ನಾನು ನನ್ನ ಸಬ್ಜೆಕ್ಟ್ ಬಗ್ಗೆ ಮಾತನಾಡಲಿಕ್ಕೆ ಆಗಲಿಲ್ಲ ಎನತಕ್ಕಂಥ ಆತಂಕ ಇವತ್ತೂ ಕೂಡ ಎದೆಯಲ್ಲಿ ತುಂಬಿಕೊಂಡಿದೆ.

1-40 ಪಿ. ಎಂ.

ಮೊದಲನೆಯದಾಗಿ ಮಾನ್ಯ ಅಧ್ಯಕ್ಷರೆ ನಿಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಯಾವ್ಯಾವ ಸದಸ್ಯರಿಗೆ ಮಾತನಾಡಲು ಎಷ್ಟೇಷ್ಟು ಅವಕಾಶ ಸಿಗುತ್ತದೆಂದರೆ ಈ ಸಿಂಗಲ್ ಪಾರ್ಟಿಯ ಸದಸ್ಯರಿಗೂ ಮತ್ತು ದೊಡ್ಡ ಪಕ್ಷದ ಸದಸ್ಯರುಗಳಿಗೆ ಒಂದೇ ಅವಕಾಶವನ್ನು ಮಾಡುವುದರಿಂದ ನಮ್ಮ ಪಾರ್ಟಿಯ ಸದಸ್ಯರಿಗೆ ಕೇವಲ 2-3 ನಿಮಿಷಗಳು ಮಾತ್ರ ಮಾತನಾಡಲು ಅವಕಾಶ ಸಿಗುತ್ತದೆ. ಒಟ್ಟು ಒಂದೂವರೆ ತಿಂಗಳುಗಳ ಕಾಲ ಸದನವನ್ನು ನಡೆಸಿದರೆ 15-20 ನಿಮಿಷಗಳ ಕಾಲ ಸಹ ಮಾತನಾಡಲು ಅವಕಾಶ ಸಿಗುವುದಿಲ್ಲ. ಸಿಂಗಲ್ ಪಾರ್ಟಿಯವರ ಸದಸ್ಯರಿಗೆ ಎಷ್ಟು ನಿಮಿಷ ಮತ್ತು ಬಾಕಿಯವರಿಗೆ ಎಷ್ಟು ಕಾಲಾವಕಾಶವೆಂದು ನಿಗಧಿಯಾಗಿದಿದ್ದರೆ, ಬಹಳ ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಮ್ಮ ನಾಯಕರ ಮೇಲೆ ಸಿಟ್ಟನ್ನು ಮಾಡಿಕೊಳ್ಳಬಹುದು, ನಮ್ಮ ಮನಸ್ಸಿನಲ್ಲಿ ಏನು ಬರುತ್ತದೆಂದರೆ, ನಾವು ಏಕೆ 40 ಜನ ಸದಸ್ಯರು ಇರತಕ್ಕಂತಹ ಪಾರ್ಟಿಯಲ್ಲಿ ಗೆದ್ದಿದ್ದೇವೆ ನಾವು ಸಹ ಏಕೆ ಸಿಂಗಲ್ ಪಾರ್ಟಿ ಇರತಕ್ಕಂತಹ ಪಕ್ಷದಲ್ಲಿ ಗೆಲ್ಲಬಾರದಿತ್ತು. ಆದರಿಂದ ನಮಗೆ ಹೆಚ್ಚು ಅವಕಾಶಗಳು ಸಿಗುತ್ತಿತ್ತು, ಎಲ್ಲಾ ವಿಷಯದಲ್ಲಿಯೂ ನಮಗೆ ಸರದಿಯಲ್ಲಿ ಒಂದೊಂದು ಸಲ ಬರುತ್ತಿತ್ತು. ಪತ್ರಿಕೆಯಲ್ಲಿ ಬಂದಾಗ ಜನರು ನಮ್ಮ ಶಾಸಕರು ಎಷ್ಟು ಆಯಕ್ಟೀವ್ ಆಗಿದ್ದಾನೆಂದು ತಿಳಿದುಕೊಳ್ಳುತಿದ್ದರು ಎಂದು ಅನ್ನಿಸುತ್ತದೆ.

+ **ಅಧ್ಯಕ್ಷರು** :- ಈ ರೀತಿಯಾಗಿ ಮಾಡಿದೆ ನಿಮ್ಮ ಪಕ್ಷದ ಸದಸ್ಯರನ್ನು ನೋಡಿ ಮೂರು ಗಂಟೆಗಳ ಕಾಲವಕಾಶವನ್ನು ಕೊಡಲಾಗಿದೆ, ಆದರೆ ನಿಮ್ಮ ಪಕ್ಷದ ಸದಸ್ಯರಲ್ಲಿ ಯಾರದರೊಬ್ಬರು ಸದಸ್ಯರು ಒಂದೂಮುಕ್ಕಾಲು ಗಂಟೆಗಳ ಕಾಲ ಮಾತನಾಡಿದರೆ, ಉಳಿದ 39 ಜನ ಸದಸ್ಯರು ಯಾವಾಗ ಮಾತನಾಡುವುದು? ನೀವು ಹೇಳಿದ ಹಾಗೆ ನಾವು ಮಾಡುವುದಿಲ್ಲ. ಒಂದು ಪಕ್ಷದಿಂದ ಒಬ್ಬರೇ ಸದಸ್ಯರು ಆಯ್ಕೆಯಾಗಿ ಬಂದಿರತಕ್ಕಂಥವರಿಗೆ ಅವರ ರಾಜಕೀಯ ಹಿನ್ನಲೆಯನ್ನು ಆಧಾರಿಸಿ ಅವರ ಅನುಭವವನ್ನು ಆಧಾರಿಸಿ ಅವಕಾಶ ವನ್ನು ಕೊಡಬೇಕೆಂದಾಗ ನಿಮ್ಮ ಕಾಲವಕಾಶವನ್ನು ತೆಗೆದು ಅವರಿಗೆ ಕೊಡುವುದಿಲ್ಲ. ಅವರಿಗೆ ಅಡಳಿತ ಪಕ್ಷದವರಿಗೆ ನೀವು ಸ್ವಲ್ಪ ಕಾಲವಕಾಶವನ್ನು ತ್ಯಾಗ ಮಾಡಿ ಎಂದು ಹೇಳಿ ಅವರ ಟೈಮ್‌ನ್ನು ತೆಗೆದುಕೊಡುತ್ತೇವೆ. ಹೋದ ವರ್ಷ ಸಹ ಇದೇ ರೀತಿಯಾಗಿ ಮಾಡಿದೆ. ಅಡಳಿತ ಪಕ್ಷದಲ್ಲಿರತಕ್ಕಂತವರ ಸದಸ್ಯರ ಭಾಷಣದ ಟೈಮ್‌ನ್ನು ತೆಗೆದು ಇವರು ಗಳಿಗೆ ಅವಕಾಶವನ್ನು ಮಾಡಿಕೊಟ್ಟಿ. ನಿನ್ನೆಯ ದಿವಸ ಮಾನ್ಯ ಸಗೀರ್‌ರವರು 100 ನಿಮಿಷಗಳ ಕಾಲವನ್ನು ಮಾತನಾಡಿದ್ದಾರೆ, ಕಾಂಗ್ರೆಸ್ ಪಕ್ಷಕ್ಕೆ 180 ನಿಮಿಷಗಳ ಕಾಲಾವ ಕಾಶವನ್ನು ಕೊಡಲಾಗಿದೆ. ಆ ಪಕ್ಷದಲ್ಲಿರತಕ್ಕಂಹ ಸದಸ್ಯರು ಇನ್ನು ಉಳಿದಿರತಕ್ಕಂತಹ 80 ನಿಮಿಷಗಳಲ್ಲಿ ಮಾತನಾಡುತ್ತಾರೆ. ಆ ರೀತಿಯಾಗಿ ನಾನು ಅಡ್ಜೆಸ್ಟ್ ಮಾಡಬೇಕು. ನಾನು ತಮಗೆ ಏನು ಹೇಳುತ್ತೇನೆಂದರೆ, ನೀವು ಹೇಳಿದಂತಹ ಮಾತುಗಳನ್ನು ಸಹ ಒಪ್ಪುತ್ತೇನೆ. ನಿಮ್ಮ ಪಕ್ಷಕ್ಕೆ ನಿಗಧಿಯಾಗಿರತಕ್ಕಂಹ ಸಮಯ ನಿಮ್ಮ ಸಂಖ್ಯಾ ಬಲಕ್ಕೆ ಅನುಗುಣವಾಗಿ ತೋರಿಸಿರುತ್ತೇನೆ. ಆದರಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಅಥವಾ ನಮಗೆ ಇನ್ನು ಹೆಚ್ಚು ಕಾಲವಕಾಶವು ಬೇಕೆಂದು ಕೇಳಿದರೆ, ಅದಕ್ಕೆ ಹೆಚ್ಚಿನ ಕಾವಕಾಶವನ್ನು ಒದಗಿಸಿಕೊಡುತ್ತೇನೆ. ನಿಮ್ಮ ಪಕ್ಷಕ್ಕೆ ಸಿಗತಕ್ಕಂತಹ ಕಾಲಾವಕಾಶವನ್ನು ನಿಮ್ಮ ಪಕ್ಷದೊಳಗೆ ಯಾವ ರೀತಿಯಲ್ಲಿ ಯಾವ್ಯಾವ ಸದಸ್ಯರಿಗೆ ಸಿಗಬೇಕೆಂದು ಮಾಡಿಕೊಳ್ಳುವುದು ನಿಮ್ಮ ಪಕ್ಷದ ಸಚ್ಚೇತಕರ ಜವಾಬ್ದಾರಿಯಾಗಿರುತ್ತದೆ. ಆ ವಿಚಾರದಲ್ಲಿ ಲೋಪವಾಗದಂತೆ ನೋಡಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಸದನದಲ್ಲಿ ಚರ್ಚೆಯು ಯಾರ ರೀತಿಯಾಗಿ ನಡೆಯಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ ಇದು ಬಹಳ ಒಳ್ಳೆಯದು. ಶ್ರೀಮಾನ್ ಹೆಚ್. ಎಸ್. ನಂಜೇಗೌಡರು ಸಕಾರಣವಾಗಿ ಸ್ವಲ್ಪ ಉದ್ವೇಗದಲ್ಲಿಯೇ ಮಾತನಾಡಿದ್ದಾರೆ. ಅದು ಸರಿಯಾದುದು. ನಮಗೂ ಸಹ ಈ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಅನುಭವ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ತೂಕಡಿಸುವಂತಹ ಸರ್ಕಾರವೆಂದು ಹೇಳಿದ್ದಾರೆ. ಈಗ ತೂಕಡಿಕೆ ಯಾವಾಗ ಬರುತ್ತದೆಂದರೆ, ವಿಷಯದಲ್ಲಿ ಬೋರ್ ಆದಾಗ ತೂಕಡಿಕೆ ಬರುತ್ತದೆ. ಹೇಳಿದ್ದನ್ನೇ, ಹೇಳಿದ್ದನ್ನೇ, ಹೇಳಿದಾಗ ಜಾಸ್ತಿ ಹೇಳಿದಾಗ ತೂಕಡಿಕೆ ಬರುತ್ತದೆ. ತಾವುಗಳು ಏನಾದರೂ ಇನ್‌ಟ್ರಸ್ಟಿಂಗ್ ವಿಷಯವನ್ನು ಏನಾದರೂ ಹೇಳಿದರೆ ಕೇಳುತ್ತೇವೆ. ಆದುದರಿಂದ ತಾವುಗಳು ಆ ರೀತಿಯಾಗಿ ಇನ್‌ಟ್ರಸ್ಟಿಂಗ್ ಆಗಿ ಮಾತನಾಡುವುದನ್ನು ಕಲಿತುಕೊಳ್ಳಿ. ನಾವೂ ಸಹ ಬಹಳ ವರ್ಷಗಳ ಕಾಲ ಮಾತನಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನೀವು ಹೇಳಿದಂತಹ ವಿಷಯಗಳು ಪತ್ರಿಕೆಗಳಲ್ಲಿ ಬರುತ್ತದೆ.

+ **ಶ್ರೀ ಜೆ. ಹೆಚ್. ಪಟೇಲ್ :-** ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಎದುರುಗಡೆಯಲ್ಲಿ ಕುಳಿತುಕೊಳ್ಳುತ್ತಿದ್ದೆವು. ಅವರು ಏನಾದರೂ ಬರೆಯುತ್ತಿದ್ದಾಗ ನಾವುಗಳು ಏನಾದರೂ ಮಾತನಾಡುವುದಕ್ಕೆ ಎದ್ದರೆ ಅವರು ಬರೆಯುವುದನ್ನು ಬಿಟ್ಟು ಕೇಳುತ್ತಿದ್ದರು ಏಕೆಂದರೆ, ಏನಾದರೂ ಒಂದು ಹೊಸ ವಿಷಯವನ್ನು ಹೇಳುತ್ತಾರೆ, ಒಂದು ವಿಚಾರವನ್ನು ಹೇಳುತ್ತಾರೆ, ಅಥವಾ ಏನಾದರೂ ಒಂದು ರಿಪೋರ್ಟ್ ಇರುತ್ತದೆ, ಹಾಸ್ಯ ಇರುತ್ತದೆಂದು, ಅದನ್ನು ಬಿಟ್ಟು ಬೋರ್ ಹೊಡೆಯುವಂತಹ ವಿಚಾರವನ್ನು ಹೇಳಿದರೆ ಮಲಗಲೇಬೇಕಾಗುತ್ತದೆ. ನೀವುಗಳು ಇದೇ ರೀತಿಯಾಗಿ ಮಾಡಿದರೆ, ಅದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇಷ್ಟೇ ಕೇಳಿಕೊಳ್ಳುವುದು. Let the level of the debate be high. ನೀವು ಏನಾದರೂ ಹೇಳಿ, ಸರ್ಕಾರವನ್ನು ಟೀಕೆ ಮಾಡಿ, ಟೀಕೆ ಮಾಡುವುದಕ್ಕೇ ವಿರೋಧ ಪಕ್ಷದವರು ಇರುವುದು ಎಂದು ನನಗೆ ಗೊತ್ತಿದೆ. ನಮ್ಮನ್ನು ಹೊಗಳುವುದಕ್ಕೆ ಅಲ್ಲ. ಸರ್ಕಾರದ ಲೋಪದೋಷಗಳಿದ್ದರೆ ತಾವು ಸರಿಪಡಿಸಬೇಕೆಂದು ನಾವುಗಳೂ ಸಹ ನಿರೀಕ್ಷೆಯನ್ನು ಮಾಡುತ್ತೇವೆ. ಆದರೆ ಸರ್ಕಾರದವರು ಎಷ್ಟೆಷ್ಟು ಒಳ್ಳೆಯ ಕೆಲಸವನ್ನು ಮಾಡಿದರು ಏನು ಹೇಳದಿದ್ದರೆ ಏನು ಮಾಡುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಅಧ್ಯಕ್ಷರನ್ನು ಕೇಳಿ ಈ ಸಲದ 10-15 ದಿನಗಳ ಕಾರ್ಯಕಲಾಪಗಳಲ್ಲಿ ಒಂದಾದರೂ ಅನಗತ್ಯವಾಗಿರತಕ್ಕಂಥ ಪ್ರಸ್ತಾಪವನ್ನು ಮಾಡಿದ್ದಾರೆಂದು ಅಧ್ಯಕ್ಷರು ಹೇಳಲಿ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೇ,

"ನಿಂದಕರು ಇರಬೇಕು, ನಿಂದಕರು ಇರಬೇಕು,
ಹಂದಿ ಇದ್ದರೆ ಕೇರಿ. ಹೇಂಗೋ ಶುದ್ದವೋ ಹ್ಯಾಂಗೆ."

ನಮ್ಮಲ್ಲಿ ಏನಾದರೂ ಕೊಳೆ ಇದ್ದರೆ, ತೆಗೆಯುವುದಕ್ಕೆ ನೀವುಗಳು ಇರಬೇಕು. ಸದನದ ಕಾಲವನ್ನು ನೀವು ಕಳೆಯಲು ಅಲ್ಲ. ಯಾವುದಾದರೂ ಒಂದು ಹಾಸ್ಯವಾದಂತಹ ವಿಷಯವನ್ನಾದರೂ ಅಥವಾ ಕತೆಯನ್ನು ಏನಾದರೂ ಹೇಳಿದರೂ ಸಹ there is some charm in the debate. Let the level of the debate be high. ಯಾವುದೇ ವಿಷಯವನ್ನು ಹೇಗಾದರೂ ಮಾಡಿ. ಅದನ್ನು ಬಿಟ್ಟು ಒಂದೇ ವಿಷಯವನ್ನು 10 ಜನರು ಅದೇ ವಿಷಯವನ್ನು ಹೇಳಿದರೆ ಅದು ಪುನರಾವರ್ತನೆಯಾಗುತ್ತದೆ. ಆ ರೀತಿಯಾಗಿ ಪುನರಾವರ್ತನೆಯನ್ನು ಮಾಡುವುದು ಬೇಡ. ಆ ರೀತಿಯಾಗಿ ಮಾಡಿದರೆ ತೂಕಡಿಕೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಾವುಗಳು ಮಲಗಿರುವವರಿಗೆ ಎಬ್ಬಿಸಬಹುದು. ಆದರೆ ಬೇಕೆಂತಲೇ ಎಚ್ಚರ ಇದ್ದು ಮಲಗಿದವರಿಗೆ ಸೋಗು ಮಾಡಿದವರಿಗೆ ನಾವುಗಳು ಎಬ್ಬಿಸುವುದಕ್ಕೆ ಆಗುವುದಿಲ್ಲ. ಅಂತಹ ಸರ್ಕಾರ ಈಗ ಬಂದಿದೆ; ನಾವುಗಳು ಏನು ಮಾಡುವುದಕ್ಕೆ ಆಗುತ್ತದೆ?

+ **ಶ್ರೀ ಬಿ. ಎನ್. ಯಡಿಯೂರಪ್ಪ :-** ಮಾನ್ಯ ಅಧ್ಯಕ್ಷರೆ, ಈ ಕಡೆಯಲ್ಲಿ ರತಕ್ಕಂತಹ ಪ್ರತಿಪಕ್ಷದವರ ಪರವಾಗಿ ಹತ್ತಾರು ಉದಾಹರಣೆಗಳನ್ನು ಕೊಡುತ್ತೇನೆ. ನಿಮ್ಮ

ಆಡಳಿತ ಪಕ್ಷದ ಸದಸ್ಯರುಗಳು, ಮಂತ್ರಿಗಳು ಸದನದಲ್ಲಿ ಬಂದು ಕುಳಿತುಕೊಂಡು ಸದನವನ್ನು ನಡೆಸಬೇಕಾಗಿತ್ತು. ಆದರೆ ಒಂದು ದುರಾದೃಷ್ಟ ಏನೆಂದರೆ ವಿರೋಧ ಪಕ್ಷದವರು 30 ಜನ ಸದನಕ್ಕೆ ಬಂದಾಗಲೂ ಸಹ ಆಡಳಿತ ಪಕ್ಷದವರು 3 ಸದಸ್ಯರುಗಳು ಇರುವುದಿಲ್ಲ. ಆ ಪರಿಸ್ಥಿತಿಯಲ್ಲಿ ನಾವುಗಳು ನಿಮ್ಮ ಹತ್ತಿರ ಬಂದು ನಾವುಗಳು ಸದನಕ್ಕೆ ಬಂದಿದ್ದೇವೆ ಸದನವನ್ನು ಪ್ರಾರಂಭವನ್ನು ಮಾಡಿ ಎಂದು ಹೇಳುವಂತಹ ಮಟ್ಟಕ್ಕೆ ಬಂದಿದೆ. ಇಷ್ಟೊಂದು ಬೇಜವಾಬ್ದಾರಿಯಾದಂತಹ ಸರ್ಕಾರ, ಜನರ ಹಿತವನ್ನು ಸಂಪೂರ್ಣವಾಗಿ ಮರೆತು ನೀವುಗಳು ಕಚ್ಚಾಟದಲ್ಲಿ ತೊಡಗಿರಬೇಕಾದರೆ ನಾವು ಏನು ಹೇಳುತ್ತಿದ್ದೆವು ಎಂದರೆ ಈಗ ಶ್ರೀ ಜೆ. ಹೆಚ್. ಪಟೇಲ್‌ರು ಮುಖ್ಯಮಂತ್ರಿಗಳಾಗಿ ಇನ್ನು ಒಂದು ತಿಂಗಳುಗಳಾಗಿದೆ ಎಂದು ಹೇಳಿ ಸ್ವಲ್ಪ ಟೈಮ್‌ನ್ನು ಕೊಡೋಣವೆಂದು ಇದ್ದೆವು. ಇನ್ನು ಮುಂದೆ ಸರ್ಕಾರಕ್ಕೆ ಬಿಸಿಯನ್ನು ಮುಟ್ಟಿಸುತ್ತೇವೆ. ಸದನವನ್ನು ಹೇಗೆ ನಡೆಸುತ್ತೇವೆಂದು ಕಾದು ನೋಡಿ.

ಶ್ರೀ ರಾಮಕೃಷ್ಣ :– ಉತ್ತರ ರೆಡಿಯಾಗಿದ್ದರೆ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಇಲ್ಲ ಎಂದರೆ ನಾಳೆ ದಿವಸ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಶ್ರೀ ಯಡಿಯೂರಪ್ಪ ನವರು ಮಾಟಾಳ್ ನಾಗರಾಜ್‌ರವರಿಗೆ ಧರಣಿಯನ್ನು ನಿಲ್ಲಿಸಿ ತಮ್ಮ ಸ್ಥಾನಕ್ಕೆ ಬರಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ಅವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ವಿಷಯ :– ಗುಡ್ಡಹಳ್ಳಿಯಲ್ಲಿ ನ್ಯಾಯಾಲಯದ ತೀರ್ಪಿನ ಸೋಗಿನಿಂದ ಮನೆಗಳ ಸಮಾಧಿ.

+ **ಶ್ರೀ ವೈ. ರಾಮಕೃಷ್ಣ :–** ಗುಡ್ಡಹಳ್ಳಿಯಲ್ಲಿ 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 20 ನೇ ತಾರೀಖಿನಂದು ಕೋರ್ಟ್ ಆದೇಶವನ್ನು ನೀಡಿದೆ ಎಂಬ ಸೋಗಿನಲ್ಲಿ ಸುಮಾರು 22 ಆರ್.ಸಿ.ಸಿ. ಮನೆಗಳೂ ಸೇರಿ, ಮೈನ್ ರೋಡ್‌ನಲ್ಲಿ ಕಟ್ಟಿರತಕ್ಕಂತಹ ಮನೆಗಳನ್ನು ಹೊಡ್ದು ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ನ್ಯಾಯಾಲಯವು ಕೊಟ್ಟಿರತಕ್ಕಂತಹ ತೀರ್ಪು ನನ್ನ ಹತ್ತಿರ ಇದೆ. ಅದನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಆ ತೀರ್ಪಿನಲ್ಲಿ ಏನು ಬರೆದಿದ್ದಾರೆಯೆ, ``warrant to be exeanted with the police help by breaking open lock". ಆ ಪ್ರತಿವಾದಿಯ ಮನೆಯ ಬಾಗಿಲನ್ನು ಒಡೆದು ಹಾಕಿ ಇವರಿಗೆ ವಶಕ್ಕೆ ಕೊಡಬಹುದು ಎಂದು 10-7-1996 ರಂದು ಕೊಟ್ಟಂತಹ ತೀರ್ಪಿನಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಈ ಆರ್ಡರ್‌ನ್ನು ಉಪಯೋಗಿಸಿಕೊಂಡು "if necessary with the police help" ಎಂದು ಅವರು ಬರೆದಿರತಕ್ಕಂತಹ ಒಂದು ಪದವನ್ನು ಉಪಯೋಗಿಸಿ ಕೊಂಡು ಪ್ರತಿವಾದಿಯ ವಾದಿಗಳು ಸುಮಾರು 100 ಜನರನ್ನು ಟ್ರಕ್‌ಗಳಲ್ಲಿ ಮತ್ತು ಬುಲ್ಡೋಜರ್ ತೆಗೆದುಕೊಂಡು ಬಂದು, ನೋಡಿ ಸ್ವಾಮಿ ಇದು ಬಹಳ ಮುಖ್ಯ ವಾಗಿರುವಂಥದ್ದು. ಬುಲ್ಡೋಜರ್ ತೆಗೆದುಕೊಂಡು ಬಂದು ಪೋಲೀಸ್‌ನವರನ್ನೂ ಸಹ ಕರೆದುಕೊಂಡು ಬಂದು ಅಲ್ಲಿ ಮಾರಮರಿಯಾಗಿ ಮನೆಗಳನ್ನು ಹೊಡೆದು ಹಾಕಿದ್ದಾರೆ. ಅಲ್ಲಿ ಏನೋ ಯುದ್ಧವನ್ನು ಮಾಡಿದ ಹಾಗೆ ಮಾಡಿದ್ದಾರೆ. ಅಲ್ಲಿ ಮನೆಯಿಂದ ಹೊರಗಡೆ